ಕರ್ನಾಟಕ ವಿಧಾನ ಪರಿಷತ್ತು

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1388
02.	ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ. ಎಂ.ನಾರಾಯಣಸ್ವಾಮಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
03.	ಉತ್ತರಿಸುವ ದಿನಾಂಕ	:	23.09.2021
04.	ಉತ್ತರಿಸುವ ಸಚಿವರು.	:	ಮಾನ್ಯ ಗೃಹ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ 15 ವರ್ಷದ ಬಾಲಕಿಯ ಮೇಲೆ ಸುಮಾರು 30 ಮಂದಿ ಸತತವಾಗಿ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣವನ್ನು ಮುಚ್ಚಿಹಾಕಲು ತನಿಖಾಧಿಕಾರಿ ಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ದಿನಾಂಕ 30.01.2021 ರಂದು ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ, ಚಿಕ್ಕಮಗಳೂರು ರವರು ಶೃಂಗೇರಿ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನಲ್ಲಿ ಶೃಂಗೇರಿ ತಾಲ್ಲೂಕು ಗೋಚುವಳ್ಳಿ ಗ್ರಾಮದ ಸುಮಾರು 15 ವರ್ಷ ವಯಸ್ಸಿನ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವ ಕುರಿತು 17 ಜನ ಆರೋಪಿಗಳ ವಿರುದ್ಧ ಶೃಂಗೇರಿ ಪೊಲೀಸ್ ಠಾಣಾ ಮೊ.ನಂ. 12/2021 ಕಲಂ 201, 370, 376(3) (ಎನ್) ಐಪಿಸಿ ಜೊತೆಗೆ 75 ಜೆ.ಜೆ. ಆಕ್ಟ್, ಕಲಂ 4(1), 3 & 5 ಪೋಕ್ಸೋ ಕಾಯ್ದೆ, ಕಲಂ 6 ಐಟಿಪಿ ಕಾಯ್ದೆ ಮತ್ತು ಕಲಂ 14 ದ ಚೈಲ್ಡ್ ಅಂಡ್ ಅಡೋಲೆಸೆಂಟ್ ಲೇಬರ್ ಆಕ್ಟ್ -1986 ರೀತ್ಯಾ ಪ್ರಕರಣ ದಾಖಲಿಸಲಾಗಿರುತ್ತದೆ. ಸದರಿ ಪ್ರಕರಣದ ಸೂಕ್ಷ್ಮತೆಯನ್ನು ಅರಿಯದೇ ಪ್ರಕರಣ ದಾಖಲಿಸಲು ವಿಳಂಬ ಮಾಡಿ ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದ್ದರಿಂದ ಪ್ರಕರಣದ ತನಿಖಾಧಿಕಾರಿಯಾದ ಶ್ರೀ. ಬಿ. ಎಂ. ಸಿದ್ರಾಮಯ್ಯ, ಪೊಲೀಸ್ ನಿರೀಕ್ಷಕರು, ಶೃಂಗೇರಿ ಪೊಲೀಸ್ ಠಾಣೆ, ಚಿಕ್ಕಮಗಳೂರು ಜಿಲ್ಲೆ ರವರನ್ನು ಪೊಲೀಸ್ ಮಹಾ ನಿರೀಕ್ಷಕರು, ಪಶ್ಚಿಮ ವಲಯ, ಮಂಗಳೂರು ರವರು ಆದೇಶ ಸಂಖ್ಯೆ. ಸಿಬ್ಬಂದಿ-3/39/ಪವ/2021, ಓ.ಬಿ. ನಂ. 31/2021, ದಿನಾಂಕ: 04/02/2021 ರೀತ್ಯಾ ಸೇವೆಯಿಂದ ಅಮಾನತ್ತುಗೊಳಿಸಿರುತ್ತಾರೆ. ಸೇವೆಯಿಂದ ಅಮಾನತ್ತುಗೊಳಿಸಿದ ಶ್ರೀ. ಬಿ. ಎಂ. ಸಿದ್ರಾಮಯ್ಯ, ಪೊಲೀಸ್ ನಿರೀಕ್ಷಕರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತಿನ ನಡವಳಿ) ನಿಯಮಗಳು 1965/89 ರ ನಿಯಮ 6 ರ ಪ್ರಕಾರ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರು ಆದೇಶ ಸಂಖ್ಯೆ. ಸಿಬಿ(8)/77/2020-21, ಓ.ಬಿ. ಸಂಖ್ಯೆ. 151/2021, ದಿನಾಂಕ: 26/02/2021 ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿ, ಪೊಲೀಸ್ ಉಪಾಧೀಕ್ಷಕರು, ಕಾರ್ಕಳ ಉಪ ವಿಭಾಗ, ಉಡುಪಿ ಜಿಲ್ಲೆ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಪ್ರಸ್ತುತ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.
ಆ	ಈ ತನಿಖಾಧಿಕಾರಿಯ ನಡೆ ಅನುಮಾನಾಸ್ಪದವಾಗಿದ್ದು, ಇವರನ್ನು ಬದಲಾಯಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ದೂರು ನೀಡಿದ್ದು, ಇದರ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು: (ವಿವರ ನೀಡುವುದು)	

		ಮುಂದುವರೆದು, ಸದರಿ ಪ್ರಕರಣದ ತನಿಖೆಯನ್ನು ಕು. ಶೃತಿ ಎನ್. ಎಸ್., ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ಜಿಲ್ಲೆ ರವರಿಗೆ ದಿನಾಂಕ 05.02.2021 ರಂದು ವಹಿಸ ಲಾಗಿರುತ್ತದೆ.
ಇ	ಲೈಂಗಿಕ ದೌರ್ಜನ್ಯಕ್ಕೆ ಒಳಗಾದ 15 ವರ್ಷದ ಬಾಲಕಿಗೆ ಸರ್ಕಾರ ಯಾವ ರೀತಿಯಲ್ಲಿ ನ್ಯಾಯ ಒದಗಿಸಿದೆ; ನೀಡದಿದ್ದಲ್ಲಿ ಯಾವಾಗ ನ್ಯಾಯ ಒದಗಿಸಿಕೊಡಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?	ಪ್ರಕರಣದಲ್ಲಿ ಈಗಾಗಲೇ ಒಟ್ಟು 50 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಆರೋಪಿಗಳು ಘನ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಧೀಶರು ಮತ್ತು ಎಫ್‌ಟಿಎಸ್‌ಸಿ-1 ನ್ಯಾಯಾಲಯ, ಚಿಕ್ಕಮಗಳೂರು ರಲ್ಲಿ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿರುದ್ಧ ಸರಿಯಾದ ರೀತಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದರಿಂದ ಆರೋಪಿಗಳ ಜಾಮೀನು ಅರ್ಜಿಗಳನ್ನು ತಿರಸ್ಕರಿಸ ಲಾಗಿರುತ್ತದೆ. ಪ್ರಕರಣದ ಸೂಕ್ಷ್ಮತೆಯನ್ನು ಆಧರಿಸಿ ಶ್ರೀ. ಎಸ್. ಎನ್. ಹಿರೇಮನಿ, ನಿವೃತ್ತ ಉಪ ನಿರ್ದೇಶಕರು, ಅಭಿಯೋಜನಾ ಇಲಾಖೆ ರವರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಕ ಮಾಡಲಾಗಿರುತ್ತದೆ. ಪ್ರಕರಣದಲ್ಲಿ ಇಲ್ಲಿಯವರೆಗೂ ಒಟ್ಟು 37 ಪ್ರತ್ಯೇಕ ದೋಷಾರೋಪಣಾ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತೆ. ಮೊದಲು ಸಲ್ಲಿಸಲಾದ ದೋಷಾರೋಪಣ ಪತ್ರಕ್ಕೆ ಮಾತ್ರ ಘನ ನ್ಯಾಯಾಲಯದಿಂದ ಸ್ಪೆಷಲ್ ಸಿಸಿ ನಂಬರ್ 24/2021 ನೀಡಲಾಗಿರುತ್ತದೆ. ಸದರಿ ಪ್ರಕರಣದಲ್ಲಿನ ಆರೋಪಿಗಳ ಗುರುತು ಕವಾಯತನ್ನು ನಡೆಸಲು ಘನ ನ್ಯಾಯಾಲಯವು ಉಪವಿಭಾಗಾಧಿಕಾರಿಗಳು, ಚಿಕ್ಕಮಗಳೂರು ಉಪವಿಭಾಗ ರವರಿಗೆ ಸೂಚಿಸಿದ್ದ ಮೇರೆಗೆ, ದಿನಾಂಕ 17/03/2021, 18/03/2021 ಮತ್ತು 26/07/2021 ರಂದು ಚಿಕ್ಕಮಗಳೂರು ಜಿಲ್ಲಾ ಕಾರಾಗೃಹದಲ್ಲಿ ಆರೋಪಿಗಳ ಗುರುತು ಕವಾಯತನ್ನು ನಡೆಸಲಾಗಿರುತ್ತದೆ. ಬಾಲಕಿಯು ಚಿಕ್ಕಮಗಳೂರು ಮಕ್ಕಳ ಕಲ್ಯಾಣ ಸಮಿತಿ ರವರ ಸ್ವಾಧೀನದಲ್ಲಿದ್ದು, ಆಕೆಯನ್ನು ಚಿಕ್ಕಮಗಳೂರಿ ನಲ್ಲಿರುವ ಸ್ವಾಧಾರ ಕೇಂದ್ರಕ್ಕೆ ಸೇರಿಸಲಾಗಿರುತ್ತದೆ. ಆಕೆಯ ವಿದ್ಯಾಭ್ಯಾಸ ಮತ್ತು ಯೋಗಕ್ಷೇಮವನ್ನು ನೋಡಿಕೊಳ್ಳ ಲಾಗುತ್ತಿದೆ. ಇತ್ತೀಚೆಗೆ ಆಕೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿದ್ದು, ಆಕೆಯೂ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾಳೆ.

HD 32 SDN 2021

(ಅರಗ ಜ್ಞಾನೇಂದ್ರ)
ಗೃಹ ಸಚಿವರು